ಶ್ರೀ ಎಂ. ವಿ. ಕೃಷ್ಣಪ್ಪ.—ಬಳ್ಳಾರಿ ಜಿಲ್ಲೆಯಲ್ಲಿಲ್ಲ. ಈ ಒಂದು ಆಫೀಸ್ ಸಂಬಂಧದಲ್ಲಿ ಕೇಳಿದ್ದಾರೆ. 13-14 ಕೇಸುಗಳಿವೆ.

Sri S. M. KRISHNA.—Sir, how soon will the Government be able to take a decision?

Sri M. V. KRISHNAPPA.—Sooner than the Hon'ble Member expects us.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಕೆಲವು ಸಂದರ್ಭಗಳಲ್ಲಿ ಹೀಗೆ ರಿಟ್ ಹಾಕಿದವರಿಗೆ ನ್ಯಾಯ ದೊರಕುವಾಗ ಅವರಿಗಿಂತ ಮೇಲಿನ ಅಧಿಕಾರಿಗಳು ಮಧ್ಯೇ ಅಡ್ಡಿ ಹಾಕುತ್ತಾರೆಂದು ಗೊತ್ತಾಗಿದೆ. ಅಂಥ ಸಂದರ್ಭಗಳಲ್ಲಿ ಕೋರ್ಟಿಗೆ ಹೋದಾಗ ಆ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಹೇಳುವುದು ಬೇರೆ ವಿಷಯ. ಇಲ್ಲಿ ಅಂಥದ್ದು ಏನೂ ನಡೆದಿಲ್ಲ. ಬೇರೆ ಅಧಿಕಾರಿಗಳು ಯಾರೂ ಅಡ್ಡ ಬಂದಿಲ್ಲ. ಸರ್ಕಾರಕ್ಕೂ ಸ್ವಲ್ಪ ಕ್ಲಿಷ್ಟವಾಗಿದೆ. ಐದಾರು ವರ್ಷಗಳ ಕೆಳಗೆ ಸರ್ಕಾರದ ಆರ್ಡರ್ ಪ್ರಕಾರ ಪ್ರಮೋಷನ್ ಕೊಟ್ಟಿದೆ. ಆಗಿನ ಪರಿಸ್ಥಿತಿಯಲ್ಲಿ ಯಾರೂ ಬರಲಿಲ್ಲ. ಆ ಮೇಲೆ ಅವರು ಜೆಸ್ಟ್ ಪಾಸ್ ಮಾಡಿ ಹೈಕೋರ್ಟಿಗೆ ರಿಟ್ ಅರ್ಜಿ ಹಾಕಿದರು. ಅದು ತೀರ್ಮಾನವಾಗಿದೆ. ಉಳಿದವರ ಸಂಬಂಧದಲ್ಲಿ legal opinion ತೆಗೆದುಕೊಂಡು ಮಾಡಬೇಕಾಗುತ್ತದೆ.

Extension of Sri Ramadevara North Nala in Krishnarajapet Taluk.

*Q.—299. Sri N. NANJE GOWDA (Krishnarajapet).—

Will the Government be pleased to state:—

(*a*) whether an estimate has been prepared for the extension of Sri Ramadevara North Nala in Krishnarajapet Taluk:

(*b*) the extent of area to be irrigated thereunder;

(*c*) the reasons for not taking up this work so far?

*A.—Sri ALUR HANUMANTHAPPA (Deputy Minister for Minor Irrigation).—

(*a*) Yes.

(*b*) 250 acres.

(*c*) Due to non-fixing up of the agency.

ಶ್ರೀ ಎಚ್. ನಂಜೇಗೌಡ.—ಶ್ರೀರಾಮ ದೇವರ ಉತ್ತರ ನಾಲಾ ಕೆಳಗೆ 250 ಎಕರೆ ತರಿ ಆಗುತ್ತದೆಂದು ಹೇಳಿದ್ದೀರಿ. ಇದನ್ನು 250 ಎಕರೆ ಎಂದು ಭಾವಿಸೋಣವೋ ಅಥವಾ 2,500 ಎಕರೆ ಎಂದು ಭಾವಿಸೋಣವೋ?

†ಶ್ರೀ ಆಲೂರು ಹನುಮಂತಪ್ಪ.—ಇದಕ್ಕೆ 250 ಎಕರೆ ಮಾತ್ರ ಆಗುತ್ತದೆ.

ಶ್ರೀ ಎಚ್. ನಂಜೇಗೌಡ.—ಮದ್ರಾಸ್ ಅಗ್ರಿಮೆಂಟ್ ಪ್ರಕಾರ ಉತ್ತರ ನಾಲೆಯನ್ನು ವಿಸ್ತರಿಸಬೇಕಾದರೆ ಎಷ್ಟು ನೀರು ಉಳಿದಿರುತ್ತದೆ?

ಶ್ರೀ ಆಲೂರು ಹನುಮಂತಪ್ಪ.—2629 ಎಕರೆಗೆ ಆಗುವಷ್ಟು ನೀರು ಇರುತ್ತದೆ.

ಶ್ರೀ ಎಚ್. ನಂಜೇಗೌಡ —ಈಗ ಎಸ್ಟಿಮೇಟ್ ಆಗಿರುವುದು 250 ಎಕರೆಗಲ್ಲ, 2,000 ಎಕರೆಗಳಿಗೆ ಇದರಲ್ಲಿ ಕೊಟ್ಟಿರುವುದು wrong information ಎಂದು ಹೇಳುತ್ತೇನೆ.

ಶ್ರೀ ಆಲೂರು ಹನುಮಂತಪ್ಪ.—ಇದು correct information. 250 ಎಕರೆಗೆ 50 ಸಾವಿರ ರೂಪಾಯಿ ಎಸ್ಟಿಮೇಟ್ ಆಗಿದೆ. ಈಗಾಗಲೇ ಟೆಂಡರ್ ಕರೆದಿದ್ದೇವೆ. Tender accept ಆಗಿದೆ.

ಶ್ರೀ ಎಚ್. ನಂಜೇಗೌಡ.—ನಾನು ಕೇಳುತ್ತ ಇರುವುದು ಅದನ್ನಲ್ಲ; ಅದು ಹಿಂದೆ ಆಗಿರುವುದು. ಮಂಜೂರಾಗಿ ಕೆಲಸ ನಡೆಯುತ್ತಿರುವುದರ ವಿವರಗಳನ್ನು ಕೊಟ್ಟಿದ್ದೀರಿ. ಶ್ರೀರಾಮ ದೇವರ ಉತ್ತರ ನಾಲಾ ಬಡಾವಣೆಯ ವಿಚಾರವನ್ನು ಕೇಳಿದ್ದೇನೆ. ಇದಕ್ಕೆ ಹೊಸದಾಗಿ ಎಸ್ಟಿಮೇಟ್ ಮಾಡಿದ್ದಾರೆ.

Mr. SPEAKER.—The Hon'ble Member is right. The Hon'ble Minister will kindly see whether the estimate has been prepared for the Sri Ramadevara North Nala, K. R. Pet Taluk.

Sri ALUR HANUMANTHAPPA.—There is a proposal also, Sir.

Mr. SPEAKER.—Answer is not effectual and complete.

Sri ALUR HANUMANTHAPPA.—There is a proposal to open a Branch Channel at 10/59th mile at Ugginahalli, Kikkeri Hobli of K. R. Pet Taluk and take 8½ miles at a cost of 8.5 lakhs.

Mr. SPEAKER.—Please see question (*b*): 'the extent of area to be irrigated thereunder': according to information given a little while ago, I heard it as 2,200 acres.

Sri ALUR HANUMANTHAPPA.—This is a fresh estimate to give water to 250 acres at a cost of Rs. 50,000. There is another proposal to open a branch channel at 10/59th mile. That proposal is under investigation. It is not yet complete.

Mr. SPEAKER.—It is still under investigation. Investigation is not over and so it has not been rightly included. The answer is right.

ಶ್ರೀ ಜಿ. ಎ. ಗೌಡ.—ಮೈಸೂರು ಮತ್ತು ಮದರಾಸು ರಾಜ್ಯಗಳಿಗೆ ಈ ಹಿಂದೆ ಒಂದು ಒಪ್ಪಂದವಾಗಿತ್ತು. ಅದರ ಪ್ರಕಾರ ನೀರನ್ನು ಉಪಯೋಗಿಸಿಕೊಳ್ಳಬೇಕೆಂದಿರುವಾಗ ಇಲ್ಲಿ ಬೇಕಾಗಿರುವ ಸುಮಾರು 2600 ಎಕರೆಯಷ್ಟು ಭೂಮಿಗೆ ನೀರನ್ನು ಪಡೆಯಲು ಏಕ ಪ್ರಯತ್ನ ಮಾಡಿಲ್ಲ?

Sri ALUR HANUMANTHAPPA.—That is why the proposal is under investigation to improve the main channel at a cost of 10 lakhs and the channel at 8th mile at a cost of 20.10 lakhs, to irrigate 1870 acres.

ಶ್ರೀ ಎಚ್. ಆರ್. ಕೇಶವಮೂರ್ತಿ.—ಉತ್ತರದಲ್ಲಿ ಏಜನ್ಸಿಯನ್ನು ಗೊತ್ತು ಮಾಡಿಲ್ಲ ಎಂದು ಹೇಳಿದೆ. ಹಾಗೆ ಮಾಡಲು ಸರಕಾರದಲ್ಲಿ ಯಾವ ಏಜನ್ಸಿಯೂ ಇಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಕಂಟ್ರಾಕ್ಟರು ಮುಂದೆ ಬರಬೇಕು. ಟೆಂಡರು 50,000ಕ್ಕೆ ಎಂದು ಬಂದಿದ್ದುದು ಜೂನು 1961 ರಲ್ಲಿ accept ಆಗಲಿಲ್ಲ. The contractor was not willing to take up the work. Again tenders were called for in February 1962.

Houses constructed for Scheduled Castes and Tribes under Subsidised Scheme in South Kanara District during First and Second Plan Period.

*Q.—305. Sri GOPAL SALENNA (Mudabidri).—

Will the Government be pleased to state :—

(*a*) the total number of houses constructed for the Scheduled Castes and Scheduled Tribes under the subsidised scheme in each Taluk in South Kanara Disrtict during the First and Second Five-Year Plan Periods ;

(*b*) the total number of incomplete houses in each taluk ;

(*c*) whether it is a fact that completion certificates have been submitted by the concerned authorities in all the above construction at the end of every financial year ?

*A.—Smt. YASHODHARA DASAPPA (Minister for Social Welfare).—

(*a*) No grants were sanctioned for the construction of houses either for Scheduled Castes or for Scheduled Tribes during the First Five Year Plan. During the II Plan period, the following number of houses were got constructed :—

Name of Taluk	*No, of houses got constructed.*	
	For Sch. Castes	*For Sch. Tribes*
1 Buntwal ..	27	31
2 Puttur ...	122	126
3 Karkala ...	102	66
4 Mangalore ...	228	46
5 Udipi ...	168	64
6 Coondapur ...	64	47
7 Belthangady	77	32
Total	788	412

In all 1,200 houses were got constructed for Scheduled Castes and Scheduled Tribes in the South Kanara District.

(*b*) Nil.

(*c*) Yes.

ಶ್ರೀ ಗೋಪಾಲ ಸಾಲೆನ್ನ.—ಪ್ರಶ್ನೆಯ (*b*) ಗೆ ಉತ್ತರವಾಗಿ incomplete houses ಇಲ್ಲ ಎಂದು ಹೇಳಿದ್ದೀರಿ. ಇಲ್ಲಿ ಮನೆಗಳನ್ನು ಕಟ್ಟುವಾಗ ಕಿಟಕಿ, ಬಾಗಿಲುಗಳಿಲ್ಲದೆ ಕಟ್ಟಿ ಜನ ವಾಸ ಮಾಡದೇ ಮಳೆಯ ನೀರು ಬಿದ್ದು ವಾಸಕ್ಕೆ ಯೋಗ್ಯವಾಗಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿಲ್ಲವೇ ?

†ಶ್ರೀಮತಿ ಯಶೋಧರ ದಾಸಪ್ಪ.—ಸರಕಾರ ಹಣ ಕೊಟ್ಟಿರುವುದು ಪ್ರತಿಯೊಂದು ಮನೆಗಳೂ ಪೂರ್ತಿಯಾಗಿರುವುದಕ್ಕೆ ಮಾತ್ರ ಎಂದು ನಮಗೆ ವರದಿ ಬಂದಿದೆ. ಸರಕಾರದಿಂದ ಪೂರ್ತಿಹಣ ಸಂದಾಯವಾಗಿ ಮನೆಗಳು ಪೂರ್ತಿಯಾಗಿವೆ ; ಜನ ವಾಸಮಾಡುತ್ತಿದ್ದಾರೆ.

ಶ್ರೀ ಗೋಪಾಲ ಸಾಲೆನ್ನ.—ಇದರ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಈ ಭಾಗದಲ್ಲಿ ಪ್ರವಾಸ ಮಾಡಿದರೆ ಅವರಿಗೆ ವಾಸ್ತವಸ್ಥಿತಿಯು ಅರಿವುಂಟಾಗುತ್ತದೆಯಲ್ಲವೆ ?

Mr. SPEAKER.—Invitation for personal inspection by the Hon'ble Minister is not a supplementary.

(*Laughter*)

ಶ್ರೀ ಗೋಪಾಲ ಸಾಲೆನ್ನ.—ಬೆಳ್ತಂಗಡಿ ತಾಲ್ಲೂಕಿನ ಶಿಲಾ ಗ್ರಾಮದಲ್ಲಿ 15 ಮನೆಗಳ ಪೈಕಿ ಒಂಬತ್ತು ಮನೆಗಳು, ಕಾರ್ಕಳಾ ತಾಲ್ಲೂಕಿನ ಮೂರಾ ಗ್ರಾಮದಲ್ಲಿ 20 ಮನೆಗಳ ಪೈಕಿ 14 ಮನೆಗಳು, ಮಂಗಳೂರಿನ ಬೈಕಂಪಾಡಿ ಗ್ರಾಮದಲ್ಲಿ ನಾಲ್ಕು ಮನೆಗಳು ಈ ರೀತಿ ಅರ್ಧಮರ್ಧ ಕೆಲಸ ಬಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ನಮಗೆ ಬಂದಿರುವ ವರದಿಯಂತೆ incomplete ಆಗಿರುವ ಮನೆಗಳಿಲ್ಲ ಎಂದು ಬಂದಿದೆ.